**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲ್ಯು :34 ಸಿಡಬ್ಲ್ಯು :49

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಮೃತ್ಯುಂಜಯ ನಾರಗೊಂಡ |
| ತಂದೆಯ ಹೆಸರು | : | ಶ್ರೀ.ಚಿದಾನಂದ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವೈದ್ಯರು, ಶ್ರೀ.ಮಲ್ಲಿಕಾರ್ಜುನ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ, ಹಾರೂಗೇರಿ |
| ವಾಸ್ತವ್ಯ | : | ಹಾರೂಗೇರಿ |
| ದಿನಾಂಕ | : | 03-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಕಳೆದ 11 ವರ್ಷಗಳಿಂದ ನಾನು ಹಾರೂಗೇರಿಯಲ್ಲಿ ಶ್ರೀ.ಮಲ್ಲಿಕಾರ್ಜುನ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯನ್ನು ನಡೆಸುತ್ತಿದ್ದೇನೆ. ನಾನು ಎಲುಬು ಮತ್ತು ಕೀಲು ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 26-08-2017 ರಂದು ಮಧ್ಯಾಹ್ನ 12:33 ಗಂಟೆಗೆ ಮುಗಳಖೋಡ ಗ್ರಾಮದ 45 ವರ್ಷ ವಯಸ್ಸಿನ ಬಸಪ್ಪ ಯಮನಪ್ಪ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಕಟ್ಟಿಗೆಯಿಂದ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ

11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಬಸಪ್ಪ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಹಣೆಯ ಮೇಲೆ ಹರಿದ ಗಾಯ ಆಗಿತ್ತು

2. ಬಲಭುಜಕ್ಕೆ ಒಳಪೆಟ್ಟು ಆಗಿತ್ತು.

ನಾನು ಗಾಯಾಳುವಿನ ತಲೆ ಮತ್ತು ಭುಜದ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ1 ಬಸಪ್ಪ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-42 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-42 [ಎ] ಎಂದು ಗುರುತಿಸಲಾಯಿತು.

3. ದಿನಾಂಕಃ 26-08-2017 ರಂದು ಮಧ್ಯಾಹ್ನ 2:36 ಗಂಟೆಗೆ ಮುಗಳಖೋಡ ಗ್ರಾಮದ 40 ವರ್ಷ ವಯಸ್ಸಿನ ಜಯಪಾಲ ಯಮನಪ್ಪ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಜಯಪಾಲ ಯಮನಪ್ಪ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಎಡ ಮುಂಗೈ ಮೇಲೆ ಒಳಪೆಟ್ಟಾಗಿತ್ತು.

ನಾನು ಗಾಯಾಳುವಿನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ10 ಫ್ರಾಸಾಃ 7 ಜಯಪಾಲ ಯಮನಪ್ಪ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-43 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-43 [ಎ] ಎಂದು ಗುರುತಿಸಲಾಯಿತು.

4. ದಿನಾಂಕಃ 26-08-2017 ರಂದು ಮಧ್ಯಾಹ್ನ 2:30 ಗಂಟೆಗೆ ಮುಗಳಖೋಡ ಗ್ರಾಮದ 25 ವರ್ಷ ವಯಸ್ಸಿನ ಶಿವಾನಂದ ಶ್ರೀಮಂತ ಬಾವಿಮನಿ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಶಿವಾನಂದ ಶ್ರೀಮಂತ ಬಾವಿಮನಿ ಅವರನ್ನು ಪರೀಕ್ಷಿಸಿದಾಗಃ-

1. ಹಣೆಯ ಮೇಲೆ ಊತ ಮತ್ತು ನೋವು ಇತ್ತು.

2. ಹಣೆಯ ಮೇಲೆ ತರಚಿದ ಗಾಯ ಆಗಿತ್ತು ಮತ್ತು ನೋವು ಇತ್ತು.

ನಾನು ಗಾಯಾಳುವಿನ ತಲೆಯ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ

ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ11 ಫ್ರಾಸಾಃ 9 ಶಿವಾನಂದ ಶ್ರೀಮಂತ ಬಾವಿಮನಿ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-44 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-44 [ಎ] ಎಂದು ಗುರುತಿಸಲಾಯಿತು.

5. ದಿನಾಂಕಃ 26-08-2017 ರಂದು ಮಧ್ಯಾಹ್ನ 12:33 ಗಂಟೆಗೆ ಮುಗಳಖೋಡ ಗ್ರಾಮದ 27 ವರ್ಷ ವಯಸ್ಸಿನ ಅನೀಲ ಮಹಾದೇವಿ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅನೀಲ ಮಹಾದೇವಿ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಬಲ ಕಿವಿ ಮತ್ತು ಕುತ್ತಿಗೆಯ ಮೇಲೆ ಒಳಪೆಟ್ಟಾಗಿತ್ತು ಮತ್ತು ನೋವು ಇತ್ತು.

ನಾನು ಗಾಯಾಳುವಿನ ತಲೆ, ಕುತ್ತಿಗೆ ಮತ್ತು ಕಿವಿಯ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ12 ಫ್ರಾಸಾಃ 10 ಅನೀಲ ಮಹಾದೇವಿ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-45 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-45 [ಎ] ಎಂದು ಗುರುತಿಸಲಾಯಿತು.

6. ದಿನಾಂಕಃ 26-08-2017 ರಂದು ಮಧ್ಯಾಹ್ನ 02:36 ಗಂಟೆಗೆ ಮುಗಳಖೋಡ ಗ್ರಾಮದ 55 ವರ್ಷ ವಯಸ್ಸಿನ ವಿಠ್ಠಲ ಯಮನಪ್ಪ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ವಿಠ್ಠಲ ಯಮನಪ್ಪ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಎಡಗೈನ ಮಧ್ಯದ ಬೆರಳಿನಲ್ಲಿ ತರಚಿದ ಗಾಯ ಆಗಿತ್ತು ಮತ್ತು ನೋವು ಇತ್ತು.

2. ಎಡ ತೊಡೆ ಮತ್ತು ಎದೆಯಲ್ಲಿ ನೋವು ಇತ್ತು.

ನಾನು ಗಾಯಾಳುವಿನ ಎದೆ, ಎಡ ತೊಡೆ ಮತ್ತು ಎಡಗೈನ ಮಧ್ಯದ ಬೆರಳಿನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಐದು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ13 ಪ್ರಾಸಾಃ 8 ವಿಠ್ಠಲ ಯಮನಪ್ಪ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-46 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-46 [ಎ] ಎಂದು ಗುರುತಿಸಲಾಯಿತು.

7. ದಿನಾಂಕಃ 26-08-2017 ರಂದು ಮಧ್ಯಾಹ್ನ 12:34 ಗಂಟೆಗೆ ಮುಗಳಖೋಡ ಗ್ರಾಮದ 28 ವರ್ಷ ವಯಸ್ಸಿನ ರಾಜು ಮಹಾದೇವ ಸಂದ್ರಿಮನಿ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು

ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ರಾಜು ಮಹಾದೇವ ಸಂದ್ರಿಮನಿ ಅವರನ್ನು ಪರೀಕ್ಷಿಸಿದಾಗಃ-

1. ಎದೆ ಮತ್ತು ತಲೆಯ ಮೇಲೆ ಊತ ಮತ್ತು ನೋವು ಇತ್ತು.

ನಾನು ಗಾಯಾಳುವಿನ ಎದೆ ಮತ್ತು ತಲೆಯ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ14 ಫ್ರಾಸಾಃ 18 ರಾಜು ಮಹಾದೇವ ಸಂದ್ರಿಮನಿ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-47 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-47 [ಎ] ಎಂದು ಗುರುತಿಸಲಾಯಿತು.

8. ದಿನಾಂಕಃ 26-08-2017 ರಂದು ಮಧ್ಯಾಹ್ನ 02:36 ಗಂಟೆಗೆ ಮುಗಳಖೋಡ ಗ್ರಾಮದ 62 ವರ್ಷ ವಯಸ್ಸಿನ ಮಹಾದೇವ ಭೀಮಪ್ಪ ಗಸ್ತಿ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಫ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಮಹಾದೇವ ಭೀಮಪ್ಪ ಗಸ್ತಿ ಅವರನ್ನು ಪರೀಕ್ಷಿಸಿದಾಗಃ-

1. ಎಡಭುಜದ ಮೇಲೆ ಮತ್ತು ಎಡ ತೊಡೆಯ ಮೇಲೆ ನೋವು ಇತ್ತು.

ನಾನು ಗಾಯಾಳುವಿನ ಎಡ ಮಂಡಿಯಿಂದ ತೊಡೆಯ ಭಾಗದ ಮತ್ತು

ಎಡಭುಜದ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ15 ಫ್ರಾಸಾಃ 24 ಮಹಾದೇವ ಭೀಮಪ್ಪ ಗಸ್ತಿ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-48 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-48 [ಎ] ಎಂದು ಗುರುತಿಸಲಾಯಿತು.

9. ದಿನಾಂಕಃ 26-08-2017 ರಂದು ಮಧ್ಯಾಹ್ನ 02:34 ಗಂಟೆಗೆ ಮುಗಳಖೋಡ ಗ್ರಾಮದ 50 ವರ್ಷ ವಯಸ್ಸಿನ ಭೀಮಪ್ಪ ಯಮನಪ್ಪ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಭೀಮಪ್ಪ ಯಮನಪ್ಪ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಎದೆಯ ಎಡಭಾಗದಲ್ಲಿ ನೋವು ಇತ್ತು.

2. ಎಡ ತೊಡೆಯ ಮೇಲೆ ನೋವು ಇತ್ತು.

3. ಬಲ ಮುಂಗೈ ಮೇಲೆ ನೋವು ಇತ್ತು.

ನಾನು ಗಾಯಾಳುವಿನ ಎದೆಯ, ಎಡ ತೊಡೆ ಮತ್ತು ಬಲ ಮುಂಗೈನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ

03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ16 ಫ್ರಾಸಾಃ 13 ಭೀಮಪ್ಪ ಯಮನಪ್ಪ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-49 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-49 [ಎ] ಎಂದು ಗುರುತಿಸಲಾಯಿತು.

10. ದಿನಾಂಕಃ 26-08-2017 ರಂದು ಮಧ್ಯಾಹ್ನ 02:31 ಗಂಟೆಗೆ ಮುಗಳಖೋಡ ಗ್ರಾಮದ 35 ವರ್ಷ ವಯಸ್ಸಿನ ಧನಪಾಲ ಯಮನಪ್ಪ ಮಾದರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಧನಪಾಲ ಯಮನಪ್ಪ ಮಾದರ ಅವರನ್ನು ಪರೀಕ್ಷಿಸಿದಾಗಃ-

1. ಎಡಭಾಗದ ಕಣಕಾಲು [Ankle Joint]ನಲ್ಲಿ ಊತ ಮತ್ತು ನೋವು ಇತ್ತು.

ನಾನು ಗಾಯಾಳುವಿನ ಎಡಭಾಗದ ಆ್ಯಂಕಲ ಜಾಯಿಂಟ್‌ನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಇರುತ್ತದೆ. ಗಾಯವು ತೀವ್ರ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ17 ಫ್ರಾಸಾಃ 19 ಧನಪಾಲ ಯಮನಪ್ಪ ಮಾದರ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-50 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-50 [ಎ] ಎಂದು ಗುರುತಿಸಲಾಯಿತು. ಗಾಯಾಳು ದಿನಾಂಕಃ 26-08-2017

ರಂದು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು ಅವರಿಗೆ ಮೂಳೆ ಜೋಡಿಸಿ ಪ್ಲಾಸ್ಟರಿಂಗ ಮಾಡಿದ್ದು ದಿನಾಂಕಃ 31-08-2017 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತೇವೆ.

11. ದಿನಾಂಕಃ 26-08-2017 ರಂದು ಮಧ್ಯಾಹ್ನ 12:33 ಗಂಟೆಗೆ ಮುಗಳಖೋಡ ಗ್ರಾಮದ 48 ವರ್ಷ ವಯಸ್ಸಿನ ಸುಶೀಲವ್ವ ಯಲ್ಲಪ್ಪ ಸಂದ್ರಿಮನಿ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಗಾಯಾಳುವನ್ನು ವಿಚಾರಿಸಲಾಗಿ ದಿನಾಂಕಃ26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಸುಶೀಲವ್ವ ಯಲ್ಲಪ್ಪ ಸಂದ್ರಿಮನಿ ಅವರನ್ನು ಪರೀಕ್ಷಿಸಿದಾಗಃ-

1. ಬಲ ಮುಂಗೈನ ಮೇಲೆ ಊತ ಮತ್ತು ನೋವು ಇತ್ತು.

ನಾನು ಗಾಯಾಳುವಿನ ಬಲ ಮಣಿಕಟ್ಟು ಮತ್ತು ಮೊಣಕೈನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 06-09-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಚಾಸಾಃ18 ಪ್ರಾಸಾಃ 20 ಸುಶೀಲವ್ವ ಯಲ್ಲಪ್ಪ ಸಂದ್ರಿಮನಿ ಅವರ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-51 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-51 [ಎ] ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜಿ ವಕೀಲರಿಂದ**

ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ನನಗೆ ಶಿಫಾರಸ್ಸು ಪತ್ರ ನೀಡಿರಲಿಲ್ಲ. ಸಾಮಾನ್ಯವಾಗಿ ಮೂಳೆ ಮುರಿದಾಗ ಅಥವಾ ಬಿರುಕು ಬಿಟ್ಟಾಗ ಊತ ಬರುವ ಸಾಧ್ಯತೆ ಇದೆ ಎನ್ನುವುದು ಸರಿ. ಆ ರೀತಿ ಮೂಳೆ ಮುರಿದಾಗ ಅಥವಾ ಬಿರುಕು ಬಿಟ್ಟಾಗ ಆ ಭಾಗದ ಚಲನವಲನಗಳಲ್ಲಿ ಕುಂಠಿತವಾಗುತ್ತದೆ ಎನ್ನುವುದು ಸರಿ.

2. ನಾನು ಪರೀಕ್ಷಿಸಿ ಎಕ್ಸರೇ ತೆಗೆದ ಗಾಯಾಳುಗಳಲ್ಲಿ, ಅವರಿಗೆ ಆಗಿದ್ದ ಗಾಯದ ಭಾಗದಲ್ಲಿ ಊತ ಇರಲಿಲ್ಲ ಎನ್ನುವುದು ಸರಿಯಲ್ಲ. ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗಾಯಾಳುಗಳು ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಮುಟ್ಟಿದರೆ ನೋವು ಇತ್ತು ಎನ್ನುವುದು ಕಣ್ಣಿಗೆ ಕಾಣುವ ಗಾಯ ಅಲ್ಲ ಎನ್ನುವುದು ಸರಿ. ಗಾಯಾಳುಗಳಿಗೆ ಆದ ಗಾಯದ ಭಾಗದಲ್ಲಿ ಚಲನವಲನಗಳಿಗೆ ತೊಂದರೆ ಇರುವ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎನ್ನುವುದು ಸರಿ.

3. ಒಬ್ಬ ಗಾಯಾಳುವನ್ನು ಹೊರತುಪಡಿಸಿ ಉಳಿದ ಗಾಯಾಳುಗಳಿಗೆ ಆದ ಗಾಯಗಳು ಮೇಲ್ನೋಟಕ್ಕೆ ಸಾಧಾರಣ ಸ್ವರೂಪದ ಗಾಯಗಳು ಎಂದು ಕಂಡುಬಂದಿರುತ್ತದೆ, ಆದರೆ ಅದು ನಿಖರವಾಗಿರುವುದಿಲ್ಲ ಎನ್ನುವುದು ಸರಿ.

4. ನಾನು ಪರೀಕ್ಷಿಸಿದ 10 ಜನ ಗಾಯಾಳುಗಳ ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ಆಯಸ್ಸನ್ನು ಕೆಲವು ಗಾಯದ ಪ್ರಮಾಣ ಪತ್ರದಲ್ಲಿ ಎರಡು ಗಂಟೆ ಎಂದು, ಕೆಲವು ಗಾಯದ ಪ್ರಮಾಣ ಪತ್ರದಲ್ಲಿ ನಾಲ್ಕು ಗಂಟೆ ಎಂದು ಬರೆದಿರುತ್ತೇನೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಗಾಯಾಳುಗಳು ಬೇರೆ ಬೇರೆ ಸಮಯದಲ್ಲಿ ಚಿಕಿತ್ಸೆಗಾಗಿ ಬಂದಿರುತ್ತಾರೆ ಮತ್ತು ಘಟನೆ 11:00 ಗಂಟೆಗೆ ಆಗಿತ್ತು ಎಂದು ಹೇಳಿರುತ್ತಾರೆ, ಆ ಕಾರಣ ನನ್ನ ಬಳಿ ಚಿಕಿತ್ಸೆಗೆ ಬಂದ ಸಮಯವನ್ನು ಆಧರಿಸಿ ಆ ರೀತಿ ಬರೆದಿದ್ದೇನೆ ಎಂದು ಹೇಳಿದ್ದಾರೆ.

5. ಸಮಯ ಕಳೆದಂತೆ ಗಾಯ ಆದ ಸ್ಥಳದಲ್ಲಿ ಚರ್ಮದ ಬಣ್ಣ ಬದಲಾಗುತ್ತದೆ ಎನ್ನುವುದು ಸರಿ.

6. ಗಾಯಾಳುಗಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, 11:00 ಗಂಟೆಗೆ ತಮ್ಮ ಮೇಲೆ ಹಲ್ಲೆ ಆಯಿತು ಎಂದು ಹೇಳಿರುತ್ತಾರೆ ಎಂದು, ನಾನು ಎಕ್ಸರೇ ತೆಗೆದು ಚಿಕಿತ್ಸೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ಚಿಕಿತ್ಸೆಗಾಗಿ ಬಂದ ಗಾಯಾಳುಗಳು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ನಿಪಿ–42 ರಿಂದ ನಿಪಿ–51 ರ ಗಾಯದ ಪ್ರಮಾಣ ಪತ್ರಗಳಲ್ಲಿ ನಮೂದು ಮಾಡಿಲ್ಲ ಎನ್ನುವುದು ಸರಿ. ಹಾರೂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಜ್ಞ ವೈದ್ಯರಿದ್ದಾರೆ ಮತ್ತು ಎಲ್ಲಾ ರೀತಿಯ ವೈದ್ಯಕೀಯ ವ್ಯವಸ್ಥೆ ಇದೆ ಎನ್ನುವುದು ನನಗೆ ಗೊತ್ತಿಲ್ಲ.

8. ನಾನು ಹೇಳಿದಂತೆ ಗಾಯಾಳುಗಳಿಗೆ ಯಾವುದೇ ನ್ಯೂನತೆ ಆಗಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಗಾಯಾಳುಗಳ ಮತ್ತು ಪೋಲಿಸರ ಕೋರಿಕೆಯ ಮೇರೆಗೆ ನಿಪಿ–42 ರಿಂದ ನಿಪಿ–51 ರಂತೆ ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎನ್ನುವುದು ಸರಿಯಲ್ಲ.

9. ಧನಪಾಲ ಯಮನಪ್ಪ ಮಾದರ ಇವರು ನಡೆದುಕೊಂಡು ಆಸ್ಪತ್ರೆಗೆ ಬಂದಿದ್ದರು ಎನ್ನುವುದಕ್ಕೆ ಸಾಕ್ಷಿ ನೋವಿನಿಂದ ಕುಂಟುತ್ತ ಬಂದಿದ್ದರು ಎಂದು ಹೇಳಿದ್ದಾರೆ. ಒರಟಾದ ಮತ್ತು ಮೊಂಡಾದ ನೆಲದ ಮೇಲೆ ಬಿದ್ದಾಗ ನಿಪಿ–42 ರಿಂದ ನಿಪಿ–51 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎನ್ನುವುದು ಸರಿ.

10. ನಾನು ಎಕ್ಸರೇ ತೆಗೆದು ಚಿಕಿತ್ಸೆ ನೀಡಿದ 10 ಜನ ಗಾಯಾಳುಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ಅವರುಗಳು ಆಸ್ಪತ್ರೆಯಿಂದ ಬಿಡುಗಡೆ ಆದ ದಿನಾಂಕವನ್ನು ನಮೂದು ಮಾಡಿಲ್ಲ ಎನ್ನುವುದು ಸರಿ.

**ಪಾಟೀ ಸವಾಲು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.